

ಶಾಲೆಗೊಳಗೆ ಕಲಿಸುವುದಷ್ಟೇ ಸವಾಲಲ್ಲ;
ಶಾಲೆ ತಲುಪುವ ಹಾದಿಯೂ ಸವಾಲು





ಅಕ್ಷತಾ ಕೃಷ್ಣಮೂರ್ತಿ

ಕಟ್ಟ ಕಡೆಯ ಗಡಿ ಗ್ರಾಮ. ಕರ್ನಾಟಕದ ನಕಾಶೆಯಲ್ಲಿ 'ಹುಲಿ ಸಂರಕ್ಷಿತ ಪ್ರದೇಶ' ಎಂದು, 'ಹಾರ್ನಬಿಲ್ ಸಂರಕ್ಷಿತ ಪ್ರದೇಶ'ವೆಂದು ಗುರ್ತಿಸಲಾಗಿರುವ ಈ ಊರಿನಲ್ಲಿ ಒಂದು ಕನ್ನಡ ಶಾಲೆ, ಹೈಸ್ಕೂಲು ಗ್ರಾಮ ಪಂಚಾಯತಿ, ಅರಣ್ಯ ಇಲಾಖೆ ಕಚೇರಿ, ಗ್ರಾಮ ಚಾವಡಿ, ಮೊನ್ನೆ ತಾನೇ ತೆರೆದ ಒಂದು ಹುಡುಗರ ಹಾಸ್ಟೆಲು, ಕ್ಷೇಮ ಕೇಂದ್ರ, ಇವಿಷ್ಟೇ ಸರ್ಕಾರಿ ಕಟ್ಟಡಗಳು. ಉಳಿದಂತೆ ಕುಣಬಿ ಬುಡಕಟ್ಟು ಮಕ್ಕಳು ತುಂಬಿರುವ ಶಾಲೆಯಲ್ಲಿ ಪಾಠ, ಬಿಸಿಯೂಟ, ಆಟ ಎಲ್ಲವೂ ಒಂದಕ್ಕಿಂತ ಒಂದು ಚಂದವಾಗಿತ್ತು. ಆಗಾಗ ಹುಲಿ–ಚಿರತೆ, ಅದರಲ್ಲಿಯೂ ಕಪ್ಪು ಚಿರತೆ, ಕರಡಿ ಸುಳಿದಾಡುವ ದಟ್ಟ ಕಾನನದ ಶಾಲೆಯೊಂದು ಇದ್ದಕ್ಕಿದ್ದಂತೆ ಕೊರೊನಾದ ಕಾರಣದಿಂದ ಒಂದು ದಿನ ಮುಚ್ಚಿಬಿಟ್ಟಿತು.

ಕೊರೊನಾ ಎಂದು ಹೆಸರು ಹೇಳುವುದು ಮಕ್ಕಳಿಗಿರಲಿ, ಇಲ್ಲಿನ ಪಾಲಕರಿಗೂ ಕಷ್ಟ. ಮಕ್ಕಳು ಶಾಲೆಗೆ ಬರಬಾರದು, ಮುಖಗವಸು ಹಾಕಬೇಕು, ಆಗಾಗ ಕೈ ತೊಳೆಯಬೇಕು ಎಂದಾಗಲೆಲ್ಲ ಈ ಬುಡಕಟ್ಟು ಜನರಿಗೆ ಏನೊಂದೂ ಅರ್ಥವಾಗದ ಪರಿಸ್ಥಿತಿ. ಮಕ್ಕಳಿಗೆ ಶಿಕ್ಷಕರು ಅರ್ಥ ಮಾಡಿಸಿ ಮನೆಗೆ ಕಳಿಸುವ ಆ ಹೊತ್ತಲ್ಲಿ, ವೈರಸ್ ಬಗ್ಗೆ ಅರಿವು ಹೊಂದಿದ ಶಾಲೆಯ ದೊಡ್ಡ ತರಗತಿಯ ಮಕ್ಕಳು, 'ಎಷ್ಟು ದಿನ ನಾವು ಮನೆಯೊಳಗೆ ಇರಬೇಕು ಟೀಚರ್?' ಎಂದು ಕೇಳಿದಾಗ ಶಿಕ್ಷಕರಿಗೂ ಉತ್ತರ ಸಿಗದು. ಕಣ್ಣಾಲಿಗಳು ತುಂಬಿಕೊಂಡು, 'ಎಲ್ರೂ ಹುಷಾರಾಗಿರಿ. ಖರೀದಿಗಾಗಿ ದಾಂಡೇಲಿ, ಕಾರವಾರ, ಗೋವಾಕ್ಕೆಲ್ಲ ಹೋಗಬೇಡಿ' ಎಂದಾಗ ಮಕ್ಕಳು 'ಆಗಲಿ' ಎಂದು ಒಕ್ಕೊರಲಲ್ಲಿ ಹೇಳಿದ್ದಷ್ಟೆ ಸತ್ಯ.

2019ರ ಮಾರ್ಚ್‌ನಿಂದ ಇಲ್ಲಿಯವರೆಗೆ ಕೊರೊನಾ ಕಾಟ ಬಿಡದೆ ಕಾಡುತ್ತಿದೆ. ತಮ್ಮ ಪಾಲಕರಿಗಿಂತ ಶಿಕ್ಷಕರನ್ನು ಹೆಚ್ಚಾಗಿ ಹಚ್ಚಿಕೊಂಡ ಮಕ್ಕಳು, ಕಾಡಿನ ಮುಗ್ಧ ಬುಡಕಟ್ಟು ಮಕ್ಕಳನ್ನು ಪ್ರೀತಿಸಿ ಪಾಠ ಮಾಡುತ್ತಿದ್ದ ಶಿಕ್ಷಕರು ಇಂದು ಮಾನಸಿಕ ತೊಳಲಾಟಕ್ಕೆ ಒಳಗಾಗಿದ್ದಾರೆ. ಶಾಲೆ ಎಂಬುದು ಜ್ಞಾನಕೇಂದ್ರವಾಗಿ, ಮಕ್ಕಳ ಬೌದ್ಧಿಕ,